ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು. ದಿಃ06.01.2016 ಒ.ಎಸ್.ನಂ. 62/2014
ಪಾಟೀ ಸವಾಲು ಃ ಶ್ರೀ. ಸಿ ಎಸ್ ಎ ಃ ವಕೀಲರಿಂದ ಃ- ಪಿ.ಡಬ್ಲ್ಯೂ. 1

ನಮ್ಮ ತಂದಗೆ ಒಟ್ಟು 5 ಜನ ಮಕ್ಕಳು. ಅವರ ಹೆಸರು ನಾಗರಾಜುರಾವ್ (ನಾನು), ಕಾಂತರಾಜ್‌ರಾವ್, ಮೋಹನ್‌ರಾವ್, ರಾಮಚಂದ್ರರಾವ್, ಕುಸುಮ ಎಂದು ಇರುತ್ತದೆ. ನಾನು ಚಿಕ್ಕವನಿದ್ದಾಗ ನಮ್ಮ ಮನೆಯಲ್ಲಿ ಬಡತನವಿತ್ತು ಎಂದರೆ ಸರಿ. ನಮ್ಮ ತಂದೆಯವರು ಸಂಸಾರವನ್ನು ನಿಭಾಯಿಸಲು ರಂಗನಾಥ ರೆಡಿಮೆಡ್ ಸೊಸೈಟಿಯಲ್ಲಿ ಸೆಕ್ರೆಟರಿಯಾಗಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಅದಕ್ಕಿಂತ ಮೊದಲು ಟೈಲರ್ ಕೆಲಸ ಮಾಡುತ್ತಿದ್ದರು. ವ್ಯವಸಾಯೋತ್ಪನ ಜಮೀನುಗಳು ನಮ್ಮ ತಂದೆಗೆ ಯಾವುದು ಇರಲಿಲ್ಲ ಎಂದರೆ ಸರಿ. ನಮ್ಮ ತಂದೆಯವರಿಗೆ ಟೈಲರಿಂಗ್ ಮತ್ತು ಸೆಕ್ರೆಟರಿ ಕೆಲಸದಿಂದ ಬಂದಂತಹ ಆದಾಯ ಮಾತ್ರ ಇತ್ತು ಎಂದರೆ ಸರಿ.

ನನ್ನ ಮದುವೆಯು 1984-85ನೇ ಸಾಲಿನಲ್ಲಿ ಆಗಿರುತ್ತದೆ. ಮದುವೆಯಾದ ನಂತರ ನಾನು ಬೇರೆ ವಾಸ ಇದ್ದೆ ಎಂದರೆ ಸರಿ. ಕಾಂತರಾಜ್‌ರಾವ್ ರವರ ಹೆಂಡತಿಯ ಹೆಸರು ಲಕ್ಷ್ಮೀಬಾಯಿ ಎಂದರೆ ಸರಿ. ಮೋಹನ್‌ರಾವ್ ರವರ ಹೆಂಡತಿಯ ಹೆಸರು ಶೋಭ ಎಂದರೆ ಸರಿ. ನಾನು ಬೇರೆಯಾದಾಗಿನಿಂದಲೂ ಸ್ವಂತಕ್ಕೆ ಟೈಲರಿಂಗ್ ಕೆಲಸ ಮಾಡುತ್ತಿದ್ದೆ. ಅದೇ ರೀತಿ ನನ್ನ ಸಹೋದರರು ಪ್ರತ್ಯೇಕವಾಗಿ ಬೇರೆ-ಬೇರೆಯಾಗಿ ವ್ಯವಹಾರ ಮಾಡಿಕೊಂಡು ಜೀವನ ಮಾಡುತ್ತಿದ್ದಾರೆಂದರೆ ಸರಿ. ಕಾಂತರಾಜ್‌ರಾವ್ ರವರು ವ್ಯವಸಾಯೋತ್ಪನ್ನ ಸಹಕಾರ ಸಂಘ, ಗುಬ್ಬಿಯ ಪಿಗ್ಮಿ ಸಂಗ್ರಹಿಸುತ್ತಿದ್ದರು ಎಂದರೆ ಸಾಕ್ಷಿಯು ಸ್ವಲ್ಪ ದಿನ ಮಾಡಿದ್ದರು ಎಂದು ನುಡಿಯುತ್ತಾರೆ. ಸದರಿ ಕಾಂತರಾಜ್ ರಾವ್ ರವರು ಪತ್ರಿಕಾ ಎಜೆಂಟರ್ ಆಗಿ ಕೆಲಸ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ, ಕಾಂತರಾಜ್ ರಾವ್ ರವರು ಶ್ರೀರಂಗ ಜವಳಿ ಅಂಗಡಿಯನ್ನು ಚೇಳೂರಿನಲ್ಲಿ ನಡೆಸುತ್ತಿದ್ದರು ಎಂದರೆ ಮುಂದೆ ನಡೆಸುತ್ತಿದ್ದ ವಿಚಾರ ನನಗೆ ಗೊತ್ತಿಲ್ಲ, ಈಗ್ಗೆ 4-5 ವರ್ಷಗಳ ಹಿಂದೆ ನಡೆಸುತ್ತಿದ್ದಾರೆ. ಮೊದಲಿನಿಂದಲೂ ಸದರಿ ಜವಳಿ ಅಂಗಡಿಯನ್ನು ನಡೆಸುತ್ತಿದ್ದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

2ನೇ ಪ್ರತಿವಾದಿಯು ಟೈಲರಿಂಗ್ ಕೆಲಸ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿಯವರು 1985ನೇ ಸಾಲಿನಿಂದಲೂ ಟೈಲರಿಂಗ್ ಕೆಲಸ ಮಾಡುತ್ತಿದ್ದಾರೆಂದರೆ ಸುಳ್ಳು. 2ನೇ ಪ್ರತಿವಾದಿಯು 1995ನೇ ಸಾಲಿನಿಂದ ಎಲ್ ಐ ಸಿ ಎಜೆಂಟರ್ ಆಗಿ ಕೆಲಸ ಮಾಡುತ್ತಿರುವ ವಿಚಾರ ನನಗೆ ಗೊತ್ತಿಲ್ಲ. 1 ಮತ್ತು 2ನೇ ಪ್ರತಿವಾದಿಗೆ ಜೀವನ ಮಾಡಲು ಆದಾಯವಿತ್ತು ಎಂದರೆ ಸಾಕ್ಷಿಯು ಅವರು ಜೀವನ ಮಾಡಬೇಕಾಗಿತ್ತು ಆದಾಯವಿತ್ತು ಎಂದು ನುಡಿಯುತ್ತಾರೆ.

3ನೇ ಪ್ರತಿವಾದಿಯು ಸಂತೆಗೆ ಹೋಗಿ ಬಟ್ಟೆಗಳನ್ನು ಮಾರಾಟ ಮಾಡುವ ಕೆಲಸ ಮಾಡುತ್ತಿದ್ದರು ಎಂದರೆ ಸುಳ್ಳು. ಈಗ 3ನೇ ಪ್ರತಿವಾದಿ ಏನು ಕೆಲಸ ಮಾಡುತ್ತಿದ್ದಾರೆಂದು ನನಗೆ ಗೊತ್ತಿಲ್ಲ. 3ನೇ ಪ್ರತಿವಾದಿ ರಾಮಚಂದ್ರರಾವ್ ಈಗ ಒಂದು ಜವಳಿ ಅಂಗಡಿಯನ್ನು ನಡೆಸುತ್ತಿದ್ದಾರೆ. ಸದರಿ ಜವಳಿ ಅಂಗಡಿಯ ಹೆಸರು ಸತ್ಯಶ್ರೀ ಜವಳಿ ಅಂಗಡಿ ಎಂದರೆ ಸರಿ. ಈಗ್ಗೆ 3-4 ವರ್ಷಗಳ ಹಿಂದೆ ನಡೆಸುತ್ತಿದ್ದಾರೆ. ಎಷ್ಟನೇ ಇಸವಿಯಲ್ಲಿ ಪ್ರಾಂಭಿಸಿರುತ್ತಾರೆಂದು ಗೊತ್ತಿಲ್ಲ. ಸದರಿ ಅಂಗಡಿಯು 1999ನೇ ಇಸವಿ ಪೂರ್ವದಿಂದಲೂ ನಡೆಯುತ್ತಿದೆ ಎಂದರೆ ನನಗೆ ಗೊತ್ತಿಲ್ಲ. ಸತ್ಯಶ್ರೀ ಜವಳಿ ಅಂಗಡಿ 1999ನೇ ಇಸವಿಯಿಂದ ಇದೆ ಎಂದರೆ ಸರಿ. ಸಾಕ್ಷಿಯು ಮುಂದುವರಿದು ಸದರಿ ಅಂಗಡಿಯ ಮಾಲೀಕ ರಾಮಚಂದ್ರರಾವ್ ಅಲ್ಲ ಎಂದು ನುಡಿಯುತ್ತಾರೆ. ಯಾರು ಅಂಗಡಿಯ ಮಾಲೀಕರು ಇದ್ದರು ಎಂದು ನನಗೆ ಗೊತ್ತಿಲ್ಲ.

ನಾನು 1961ನೇ ಸಾಲಿನಲ್ಲಿ ಹುಟ್ಟಿರುತ್ತೇನೆ. ನನ್ನ ತಂಗಿಗೆ ಮದುವೆಯಾಗಿ ಸುಮಾರು 12-13 ವರ್ಷಗಳಾಗಿರುತ್ತದೆ. ಮದುವೆಯಾದಾಗಿನಿಂದಲೂ ಅವರು ತುಮಕೂರಿನಲ್ಲಿ ಗಂಡನ ಮನೆಯಲ್ಲಿ ವಾಸ ಇರುತ್ತಾರೆ. ದಾವಾ ಐಟಂ ನಂ.1 ರ ಖಾತಾ ನಂ.396 ಅದರ ವಿಸ್ತೀರ್ಣ 74 ಇಂಟು 11 ಇರುತ್ತದೆ. 2ನೇ ಐಟಂ ನಿವೇಶನವಿರುತ್ತದೆ. ಸದರಿ ಆಸ್ತಿಯ ಖಾತಾ ನಂ.849/6. ದಾವಾ ಐಟಂ ನಂ.3 ನನ್ನ ತಂದೆ ಕೊಂಡಂತಹ ಹಳೆಯ ಮನೆ ಇದ್ದು ಅದರ ವಿಸ್ತೀರ್ಣ 74 ಇಂಟು 15 ಇರುತ್ತದೆ. ದಾವಾ ಐಟಂ ನಂ.4ರಲ್ಲಿ ಏನು ಇದೆ ಎಂದು ನನಗೆ ಗೊತ್ತಿದೆ ಆದರೆ

ಈಗ ಅದರ ಖಾತಾ ನಂ. ಹೇಳಲಾಗುವುದಿಲ್ಲ, ವಿಸ್ತೀರ್ಣ 369/1 ರಲ್ಲಿ 20 ಇಂಟು 16 ವರೆ ಇರುತ್ತದೆ. ದಾವಾ ಐಟಂ ನಂ.6 ರಲ್ಲಿ ಮನೆ ಇದ್ದು ಅದರ ನಂ. 773 ಇರುತ್ತದೆ. ಅದರ ವಿಸ್ತೀರ್ಣ 30 ಇಂಟು 50 ಇರುತ್ತದೆ. ದಾವಾ ಐಟಂ ನಂ.5ರ ಖಾತಾ ನಂ.843 ಇರುತ್ತದೆ. ಅದರಲ್ಲಿ 9 ನಿವೇಶನಗಳು ಇರುತ್ತದೆ. ದಾವಾ ಆಸ್ತಿಗಳ ಬಗ್ಗೆ ನನಗೆ ಏನು ಗೊತ್ತಿಲ್ಲದೇ ಇರುವುದರಿಂದ ತಪ್ಪು ಹೇಳುತ್ತಿದ್ದೇನೆಂದರೆ ಸರಿಯಲ್ಲ.

(ಶ್ರೀ. ಸಿ ಎಸ್ ಎ ಃ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದು ನೀಡಲಾಯಿತು)

(ನನ್ನ ಸಮಕ್ಷಮ ತೆ ನ್ಯಾ ಬೆ ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಅಧಿಕ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಗುಬ್ಬಿ